

# ಐಒಎಸ್ 16 ಅನಾವರಣ

ಪ್ರತಿ ವರ್ಷ ಆ್ಯಪಲ್ ವರ್ಲ್ಡ್‌ವೈಡ್ ಡೆವಲಪರ್ಸ್ ಕಾನ್ಫರೆನ್ಸ್ ನಡೆಯುತ್ತದೆ. ಇಲ್ಲಿ ಆ್ಯಪಲ್ ಕಂಪನಿಯ ಭವಿಷ್ಯದ ಯೋಜನೆಗಳ ಬಗ್ಗೆ ಪ್ರಸ್ತಾಪ ಹಾಗೂ ಪ್ರಕಟಣೆಗಳನ್ನು ಮಾಡಲಾಗುತ್ತದೆ. ಅಂತೆಯೇ ಈಚೆಗೆ ಕ್ಯಾಲಿಫೋರ್ನಿಯಾದಲ್ಲಿ ಆ್ಯಪಲ್ ವರ್ಲ್ಡ್‌ವೈಡ್ ಡೆವಲಪರ್ಸ್ ಕಾನ್ಫರೆನ್ಸ್ (WWDC 2022) ನಡೆದಿದ್ದು, ಅದರಲ್ಲಿ 'ಐಒಎಸ್ 16' ಅನ್ನು ಅನಾವರಣಗೊಳಿಸಿರುವ ಆ್ಯಪಲ್ ಕಂಪನಿಯು ಹಲವು ಯೋಜನೆಗಳ ಬಗ್ಗೆಯೂ ಪ್ರಸ್ತಾಪಿಸಿದೆ.

ಐಒಎಸ್ 16 ಅಪ್‌ಡೇಟ್‌ನಲ್ಲಿ ಲಾಕ್ ಸ್ಕ್ರೀನ್ ಕಸ್ಟಮೈಸೇಷನ್, ನ್ಯೂ ಲಾಕ್ ಸ್ಕ್ರೀನ್ ನೋಟಿಫಿಕೇಷನ್, ಲೈವ್ ಆಕ್ಟಿವಿಟಿ, ಫೋಕಸ್ ಫಿಲ್ಟರ್, ಫೋಕಸ್ ಮೋಡ್ ಸೇರಿದಂತೆ ಹಲವು ಫೀಚರ್ಸ್ ಪರಿಚಯಿಸಿರುವ ಕಂಪನಿಯು, ತನ್ನ ಯಾವೆಲ್ಲ ಡಿವೈಸ್‌ಗಳಲ್ಲಿ ಈ ಐಒಎಸ್ ಅನ್ನು ಅಪ್‌ಡೇಟ್ ಮಾಡಿಕೊಳ್ಳಬಹುದು ಮತ್ತು ಯಾವೆಲ್ಲ ಡಿವೈಸ್‌ಗಳಿಗೆ ಇದು ಸ್ಪಂದಿಸದು ಎಂಬುದರ ವಿವರವನ್ನು ನೀಡಿದೆ. ಸದ್ಯ ಐಒಎಸ್ 16ರ ಬೀಟಾ ವರ್ಷನ್ ಮಾತ್ರ ಲಭ್ಯವಿದ್ದು, ಕೆಲ ದಿನಗಳಲ್ಲಿ ಎಲ್ಲರ ಬಳಕೆಗೆ ಸಿಗಲಿದೆ.

## ಯಾವೆಲ್ಲ ಫೀಚರ್ಸ್?

ರಿಕವರ್ ರೀಸೆಂಟ್ ಡಿಲಿಡೆಟ್ ಮೆಸೇಜಸ್, ಸ್ಟ್ರಾಂಗ್ ಪಾಸ್‌ವರ್ಡ್ ಎಡಿಟಿಂಗ್, ವೈ–ಫೈ ಪಾಸ್‌ವರ್ಡ್ಸ್ ಇನ್ ಸೆಟ್ಟಿಂಗ್ಸ್, ಆಸ್ಕ್ ಸಿರಿ ಟು ಹ್ಯಾಂಗ್ ಅಪ್ ಎ ಕಾಲ್, ಡಿಲೀಟ್ ದೋಸ್ ಡುಪ್ಲಿಕೇಟ್ ಫೋಟೋಸ್, ಲಾಕ್ ಹಿಡೆನ್ ಆ್ಯಂಡ್ ರೀಸೆಂಟ್ ಡಿಲಿಟೆಡ್ ಆಲ್ಬಮ್ಸ್ ಇನ್ ಫೋಟೊಸ್, ಸೆಕ್ಯುರಿಟಿ ಅಪ್‌ಡೇಟ್ಸ್, ಫೋರ್‌ಗ್ರೌಂಡ್ ಬ್ಲರ್ ಇನ್ ಪೋರ್ಟ್ರೈಟ್ ಫೋಟೋಸ್, ನ್ಯೂ ಡಿಕ್ಷನರೀಸ್, ನ್ಯೂ ಲ್ಯಾಂಗ್ವೇಜಸ್ ಫಾರ್ ಎಮೋಜಿ ಸರ್ಚ್, ಎಡಿಟಿಂಗ್ ಫೋಟೊಸ್ ಸೇರಿದಂತೆ ಹಲವು ಹೊಸ ಫೀಚರ್‌ಗಳನ್ನು ಆ್ಯಪಲ್ ಪರಿಚಯಿಸಿದೆ. ಇವುಗಳ ಪೈಕಿ ಬಹುತೇಕ ಹಳೇ ಫೀಚರ್‌ಗಳಿದ್ದು, ಅವುಗಳಲ್ಲಿ ಅತ್ಯಾಧುನಿಕ ಅಂಶಗಳನ್ನು ಸೇರ್ಪಡಿಸಿರುವುದು ಗಮನಾರ್ಹ.




**ಶಶಿಕುಮಾರ್ ಸಿ.**

## ಯಾವ ಡಿವೈಸ್‌ಗಳಲ್ಲಿ ಲಭ್ಯ

ಐಫೋನ್ 13, ಐಫೋನ್ 13 ಮಿನಿ, ಐಫೋನ್ 13 ಪ್ರೊ, ಐಫೋನ್ 13 ಪ್ರೊ ಮ್ಯಾಕ್ಸ್, ಐಫೋನ್ 12, ಐಫೋನ್ 12 ಮಿನಿ, ಐಫೋನ್ 12 ಪ್ರೊ, ಐಫೋನ್ 12 ಪ್ರೊ ಮ್ಯಾಕ್ಸ್, ಐಫೋನ್ 11, ಐಫೋನ್ 11 ಪ್ರೊ, ಐಫೋನ್ 11 ಪ್ರೊ ಮ್ಯಾಕ್ಸ್, ಐಫೋನ್ ಎಕ್ಸ್‌ಎಸ್, ಐಫೋನ್ ಎಕ್ಸ್‌ಎಸ್ ಮ್ಯಾಕ್ಸ್, ಐಫೋನ್ ಎಕ್ಸ್‌ಆರ್, ಐಫೋನ್ ಎಕ್ಸ್, ಐಫೋನ್ 8, ಐಫೋನ್ 8 ಪ್ಲಸ್, ಐಫೋನ್ ಎಸ್‌ಇ (2ಜಿ ಮತ್ತು ನಂತರ) ಡಿವೈಸ್‌ಗಳಿಗೆ ಹೊಸ ಐಒಎಸ್ 16 ಲಭ್ಯವಿದೆ. ಆಪಲ್ ಐಫೋನ್ 6ಎಸ್, ಐಫೋನ್ 7 ಮತ್ತು ಬೇಸ್ ಐಫೋನ್ ಎಸ್‌ಇ ಡಿವೈಸ್‌ಗಳಿಗೆ ಹೊಸ ಐಒಎಸ್ 16 ಲಭ್ಯವಿಲ್ಲ.

## ಬೀಟಾ ವರ್ಷನ್ ಬಳಕೆ ಹೇಗೆ?

ಐಒಎಸ್ 16 ಅನ್ನು ಬೀಟಾ ಬಳಕೆದಾರರು ಮಾತ್ರ ಬಳಸಲು ಅವಕಾಶವಿದ್ದು, ಇದಕ್ಕೆ ಪ್ರವೇಶವನ್ನು ಪಡೆಯಬೇಕಾದರೆ ಬಳಕೆದಾರರು ಬೀಟಾ ಪ್ರೋಗ್ರಾಂನ ಭಾಗವಾಗಿರಬೇಕಾಗುತ್ತದೆ.

- ಬೀಟಾ ಪ್ರೋಗ್ರಾಂ ಸೇರಲು ಮೊದಲನೆಯದಾಗಿ, ಐಫೋನ್ ಬ್ಯಾಕಪ್ ಅನ್ನು ಬಳಕೆದಾರರು ಇಟ್ಟುಕೊಳ್ಳಬೇಕು.
- ಆ್ಯಪಲ್‌ನ ಆ್ಯಪ್‌ಸ್ಟೋರ್‌ನಲ್ಲಿ ಲಭ್ಯವಿರುವ ಆ್ಯಪಲ್ ಡೆವಲಪರ್ ಅಪ್ಲಿಕೇಶನ್ ಇನ್‌ಸ್ಟಾಲ್ ಮಾಡಬೇಕು.
- ಹೆಸರು ನೋಂದಾಯಿಸಿಕೊಂಡು ಆ್ಯಪಲ್ ಐಡಿಯೊಂದಿಗೆ ಸೈನ್ ಇನ್ ಆಗಬೇಕು.
- ಸೈನ್ ಇನ್ ಆದ ಬಳಿಕ ಬೀಟಾ ಪ್ರೋಗ್ರಾಂ ಅನ್ನು ಆಯ್ಕೆ ಮಾಡಿಕೊಂಡು ಪ್ರೋಗ್ರಾಂ ಲೈಸೆನ್ಸ್ ಅಗ್ರಿಮೆಂಟ್‌ಗೆ ಒಪ್ಪಿಗೆ ನೀಡಬೇಕು
- ಸದಸ್ಯತ್ವ ಶುಲ್ಕ ಪಾವತಿಸಿ ಬೀಟಾ ವರ್ಷನ್ ಅನ್ನು ಬಳಸಬಹುದು.

## ಡೌನ್‌ಲೋಡ್ ಮಾಡುವುದು ಹೇಗೆ?

'ಆ್ಯಪಲ್ ಡೆವಲಪರ್ ಪ್ರೋಗ್ರಾಂ ಡೌನ್‌ಲೋಡ್' ವೆಬ್‌ಪೇಜ್‌ಗೆ ಲಾಗಿನ್ ಆಗಿ ಐಒಎಸ್ 16 ಬೀಟಾ 'ಇನ್‌ಸ್ಟಾಲ್ ಪ್ರೊಫೈಲ್' ಆಯ್ಕೆ ಮಾಡಿಕೊಳ್ಳಬೇಕು. ಬಳಿಕ ಸೆಟ್ಟಿಂಗ್ಸ್ ಅಪ್ಲಿಕೇಷನ್ ತೆರೆದು 'ಪ್ರೊಫೈಲ್ ಡೌನ್‌ಲೋಡ್' ಆಯ್ಕೆಯನ್ನು ಕ್ಲಿಕ್ಕಿಸಬೇಕು. ನಂತರ ಸ್ಕ್ರೀನ್‌ನ ಬಲ ಮೂಲೆಯಲ್ಲಿ ಕಾಣುವ 'ಇನ್‌ಸ್ಟಾಲ್' ಆಯ್ಕೆಯನ್ನು ಕ್ಲಿಕ್ ಮಾಡಿ ಡಿವೈಸ್ ಅನ್ನು ರಿಸ್ಟಾರ್ಟ್ ಮಾಡಬೇಕು. ಬಳಿಕ ಚಾರ್ಜರ್ ಪ್ಲಗ್ ಇನ್ ಮಾಡಬೇಕು. ಅದಕ್ಕೂ ಮುಂಚೆ ವೈ–ಫೈ ಕನೆಕ್ಷನ್ ಆಗಿರುವ ಬಗ್ಗೆ ಖಾತರಿ ಮಾಡಿಕೊಳ್ಳಬೇಕು. ಸೆಟ್ಟಿಂಗ್ಸ್‌ಗೆ ಹೋಗಿ ಜನರಲ್ ಆಯ್ಕೆಯನ್ನು ಕ್ಲಿಕ್ಕಿಸಬೇಕು. ನಂತರ ಸಾಫ್ಟ್‌ವೇರ್ ಅಪ್‌ಡೇಟ್ ಆಯ್ಕೆ ಒತ್ತಿದರೆ ಡೌನ್‌ಲೋಡ್ ಆಗುತ್ತದೆ. ಅದನ್ನು ಇನ್‌ಸ್ಟಾಲ್ ಮಾಡಿ ಬಳಸಿ ■